(SRI V. MASIYAPPA)

(*b*) whether it was brought to the notice of Government that the Mysore University has failed to implement the decision of the Government communicated in the Education Secretary's letter No. ED 7 DUN 57, dated 18th September 1957 addressed to the Register, University of Mysore;

(c) if so, the steps taken to make these posts gazetted as nearly 15 colleges are being transferred from the administrative control of the University to the State Government;

(*d*) the reason for difference of pay of teachers and staff working in University and Government Colleges?

Sri A. R. BADARINARAYANA (Minister for Education).—

(*a*) (i) Yes.

(ii) This will be examined.

(*b*) In so far as the revision of pay scales is concerned the Mysore University have implemented the instructions of Government contained in that letter. With regard to the posts of Lecturers, they have not made them Gazetted.

(*c*) This does not arise in view of reply to clause (*a*) (ii) of the Question.

(*d*) There is no difference in the scales of pay.

2-00 P.M.

Notice about the H. M. T. Lock out

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಅಧ್ಯಕ್ಷರೇ, ನಾನು ಒಂದು ನೋಟೀಸನ್ನು ನಗರದಲ್ಲಿರುವ ಹಿಂದೂಸ್ತಾನ್ ಮೆಷಿನ್ ಟೂಲ್ಸ್ ಕಾರ್ಖಾನೆ ಬಗ್ಗೆ ಕಳುಹಿಸಿದ್ದೆ.

ಅಧ್ಯಕ್ಷರು.—ತಾವು ಕಾಲಿಂಗ್ ಅಟೆನ್‌ಷನ್ ನೋಟೀಸು ಕಳುಹಿಸಿಕೊಟ್ಟಿದ್ದೀರಿ. ಅದನ್ನು ಮಾನ್ಯ ಮಂತ್ರಿಗಳ ಕಡಗೆ ಕಳುಹಿಸಿಕೊಡಲಾಗಿದೆ ಈಗ ಇಲ್ಲಿ ಮಿನಿಸ್ಟರು ಇಲ್ಲ. ಇದರ ಬಗ್ಗೆ ಯಾರು ಜವಾಬು ಕೊಡುತ್ತಾರೋ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದು ಬಹು ಮುಖ್ಯವಾದ ಪ್ರಶ್ನೆ. ಸುಮಾರು 19 ದಿನಗಳಿಂದ ಇಲ್ಲಿನ ಕಾರ್ಖಾನೆ ಮುಚ್ಚಿರುವುದರಿಂದ ನಾಲ್ಕು ಸಾವಿರ ಕಾರ್ಮಿಕರಿಗೆ ಬಹಳ ಕಷ್ಟಗಳಾಗುತ್ತಿವೆ ನಾನು ಕಾಲಿಂಗ್ ಅಟೆನ್‌ಷನ್ ಮೋಷನ್ ಕೊಟ್ಟರೂ ಅದು ಯಾವಾಗ ಬರುತ್ತದೆ ಅಥವಾ ಅದರ ಬಗ್ಗೆ ಯಾರು ಉತ್ತರ ಕೊಡುತ್ತಾರೋ ಗೊತಾಗುತ್ತಿಲ್ಲ. ಅಲ್ಲಿನ ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿದೆ. ಅದಕ್ಕೆ ಅವಕಾಶವಾಗಕೂಡದು. ಆದಷ್ಟುಮಟ್ಟಿಗೆ ಶಾಂತಿಯುತವಾಗಿ ಇದು ಬಗೆಹರಿಯಬೇಕೆಂಬದೇ ನಮ್ಮ ಆಸೆ. ಇವೊತ್ತಿನ ದಿವಸ ಪತ್ರಿಕೆಗಳಲ್ಲಿ ಬಂದಿರುವುದನ್ನು ನೋಡಿದರೆ ಪಾರ್ಲಿಮೆಂಟಿನಲ್ಲಿ ಇದೇ ಸಂಸ್ಥೆಯ ಬಗ್ಗೆ ವಿಪುಲವಾದ ಪ್ರಶ್ನೋತ್ತರಗಳಾಗಿರುವುದು ಎಲ್ಲರಿಗೂ ಗೊತ್ತಿರಬಹುದು. ಆದುದರಿಂದ ನಾನು ತಮ್ಮ ಮೂಲಕ ಕೇಳಿಕೊಳ್ಳುವುದು ಇದನ್ನು ಆದಷ್ಟು ಬೇಗ ಇಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು ಎಂದು.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್‌ನ ಬಗ್ಗೆ ಉತ್ತರ ತರಿಸಿಕೊಡುತ್ತೇನೆ.